## *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

ಎಸ್.ಸಿ. 257/2021

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಲಕ್ಷ್ಮಿ ನರಸಿಂಹರಾಜು | | *ಪ್ರಮಾಣ ಮಾಡಿಸಿದ ದಿನಾಂಕಃ* |
| **ತಂದೆ/ಗಂಡನ ಹೆಸರು** | ಃ ಶ್ರೀ ನರಸಿಂಹರಾಜು | | **09.01.2025** |
| **ವಯಸ್ಸು** | ಃ **59** ವರ್ಷ | | |
| **ವೃತ್ತಿ** | ಃ ಆಟೋ ಚಾಲಕ | **ಪ್ರಾ.ಸಾ.** ಃ | **09** |
| **ವಾಸಸ್ಥಳ** | ಃ ಮೈಸೂರು | **ಚಾ.ಸಾ.** ಃ | **06** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. 4 ವರ್ಷಗಳ ಹಿಂದೆ ನಾನು ಜೆ.ಎಸ್.ಎಸ್ ಆಸ್ಪತ್ರೆಯ ಆಟೋ ಸ್ಟ್ಯಾಂಡ್ ಬಳಿ ಇದ್ದಾಗ ಪೊಲೀಸರು ನನ್ನ ಸಹಿ ಪಡೆದಿದ್ದರು ಆದರೆ ಆ ಕಾಲಕ್ಕೆ ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ. ಆ ಕಾಲಕ್ಕೆ ನನಗೆ ಯಾವುದೇ ವಸ್ತುವನ್ನು ತೋರಿಸಿಲ್ಲ ಮತ್ತು ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ. ಈಗ ನಾನು ನೋಡುತ್ತಿರುವ ನಿ.ಪಿ-2 ದಾಖಲೆ ನಾನು ಮಾಡಿದ್ದ ದಾಖಲೆಯಿದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಸಹಿಯನ್ನು ನಿ.ಪಿ-2(ಸಿ) ಎಂದು ಗುರುತಿಸಿದೆ.

*ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.*

__ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-__

2. ದಿಃ06.10.2020 ರಂದು ಬೆಳಗ್ಗೆ 10.30 ಕ್ಕೆ ಮೈಸೂರಿನ ಜೆ.ಎಸ್.ಎಸ್ ಆಸ್ಪತ್ರೆಯ ಮುಂಭಾಗದ ಎಂ.ಜಿ.ರಸ್ತೆಯಲ್ಲಿ ಮಹಜರ್ ಮಾಡಿದ್ದರು ಎಂದರೆ ಸರಿಯಲ್ಲ. ಆ ಕಾಲಕ್ಕೆ ಎಂ.ಆರ್.ನವೀನ್ ಕುಮಾರ್ ಇವರು ದಿಃ05.10.2020 ರ ಬೆಳಗಿನ ಜಾವ ತನ್ನ ಮೇಲೆ ಮತ್ತು ತನ್ನ ಸ್ನೇಹಿತರ ಮೇಲೆ ಹಲ್ಲೆ ಆಗಿದ್ದ ಸ್ಥಳ ಎಂದು ತೋರಿಸಿದ ಮೇರೆಗೆ ಆ ಸ್ಥಳದಲ್ಲಿ ಮಹಜರ್ ಮಾಡಿದ್ದರು ಎಂದರೆ ಸರಿಯಲ್ಲ. ಈಗ ನಾನು ನೋಡುತ್ತಿರುವ ಎಂ.ಒ-2 ರಿಂದ 4 ಎಂದು ಗುರುತಿಸಿರುವ ವಸ್ತುಗಳನ್ನು ಆ ಕಾಲಕ್ಕೆ ಅಮಾನತ್ತು ಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಅದೇ ಸ್ಥಳದಲ್ಲಿ ನಿ.ಪಿ-2 ರಂತೆ ಮಹಜರ್ ಮಾಡಿ ನನಗೆ ಓದಿ ಹೇಳಿ ನನ್ನ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ನಾನು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ-8 ಎಂದು ಗುರುತಿಸಿದೆ.

__ಪಾಟೀ ಸವಾಲು ಃ ಆರೋಪಿ ಪರ ವಕೀಲರವರಿಂದಃ- ಇಲ್ಲ__

__ಮರು ವಿಚಾರಣೆಃ- ಇಲ್ಲ.__

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು